**ಓ ಎಸ್ ನಂಃ 11/2015**

**ಡಿ. ಡಬ್ಲ್ಯೂ ಃ 1**

**ದಿಃ 16.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದ ಃ**

ನಾನು ದಿನಾಂಕ ಃ 5.12.1995 ರಲ್ಲಿ ಹುಟ್ಟಿರುತ್ತೇನೆ. ನನ್ನ ತಂದೆ 1988 ರಲ್ಲಿ 2 ಸ್ವತ್ತುಗಳನ್ನು, 1993, 95, 98 ರಲ್ಲಿ ಉಳಿದ ಸ್ವತ್ತುಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ. 1988 ರಲ್ಲಿ ಯಾವ ಸ.ನಂ.ಗಳನುನ ಕೊಂಡು ಕೊಂಡಿದ್ದಾರೆ ಎಂದು ಹೇಳಲಾಗುವುದಿಲ್ಲ. 1993 ರಲ್ಲಿ ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನ ಸ.ನಂ. ಗೊತ್ತಿಲ್ಲ. ಅದೇ ರೀತಿ 1995 ರಲ್ಲಿ ತೆಗೆದುಕೊಂಡ ಸ್ವತ್ತಿನ ಸ.ನಂ. ಗೊತ್ತಿಲ್ಲ. ಇನ್ನೊಂದು ಸ್ವತ್ತನ್ನು 1998 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ಅದರ ಸ.ನಂ. ನನಗೆ ಹೇಳಲಾಗುವುದಿಲ್ಲ. ಯಾವ ಕ್ರಯಪತ್ರದ ಮೂಲಕ ಎಷ್ಟು ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ದಾಖಲೆ ನೋಡದೆ ನನಗೆ ಹೇಳಲಾಗುವುದಿಲ್ಲ, ನಮ್ಮ ಕ್ರಯಕ್ಕೆ ತೆಗೆದುಕೊಂಡಾಗ ನನಗೆ ಅಂದಾಜು 10 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ನನಗೆ ಜಮೀನು ಯಾರದು ಹಾಗೂ ಇತರೆ ವಿಷಯಗಳು ನನ್ನ ಗಮನಕ್ಕೆ ಇರಲಿಲ್ಲ ಎಂದರೆ ಸರಿ.

ನಮ್ಮ ತಂದೆ ದಿನಾಂಕ ಃ 9.11.2012 ರಂದು ತೀರಿಕೊಂಡಿದ್ದಾರೆ. ಮೂಲ ಪುರುಷ ಆಂಜನಪ್ಪ ಇವರಿಗೆ ದಾವಾ ಸ್ವತ್ತುಗಳು ಹೇಗೆ ಬಂದವು ಎಂದು ನನಗೆ ದಾಖಲೆ ನೋಡದೆ ಹೇಳಲಾಗುವುದಿಲ್ಲ, ಆಂಜನಪ್ಪ ಯಾವಾಗ ತೀರಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಆಂಜನಪ್ಪ ಇವರಿಗೆ ಇಬ್ಬರು ಹೆಂಡತಿಯರು ಮತ್ತು 4/5 ಜನ ಮಕ್ಕಳಿರಬಹುದು. ಅವರುಗಳ ಹೆಸರುಗಳು ನನಗೆ ನೆನಪಿಲ್ಲ. ಆಂಜನಪ್ಪ ಇವರು ತೀರಿಕೊಂಡ ನಂತರ ಅವರ ಎಲ್ಲ ಸ್ವತ್ತುಗಳಲ್ಲಿ ಅವರ ಹೆಂಡತಿ ಮತ್ತು ಮಕ್ಕಳಿಗೆ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆಂಜನಪ್ಪ ಇವರ ಒಬ್ಬೊಬ್ಬರೆ ಮಕ್ಕಳು ವ್ಯಯಕ್ತಿಕವಾಗಿ ಸ್ವತ್ತುಗಳನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆಂಜನಪ್ಪ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರ ಮೊದಲ ಹೆಂಡತಿ ಮೃತಪಟ್ಟ ನಂತರ 2 ನೇ ಹೆಂಡತಿಯನ್ನು ಮದುವೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದಿಗಳು ಆಂಜನಪ್ಪ ಇವರ 2 ನೆ ಹೆಂಡತಿ ಮತ್ತು ಮಕ್ಕಳು ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಆಂಜನಪ್ಪ ಇವರಿಗೆ ಮೊದಲೇ ಹೆಂಡತಿಯ ಮಗ ಪಿ ಎ ಜಯರಾಮ ಎಂಬುವವರು ಇದ್ದರು ಎಂದರೆ ಸರಿ. ಜಯಮ್ಮ ಇವರು ಆಂಜನಪ್ಪ ಇವರ 2 ನೇ ಹೆಂಡತಿ ಎಂದರೆ ಸರಿ. ಇವರಿಗೆ ಧನಂಜಯ, ಚೌಡಮ್ಮ, ಹೇಮಾವತಿ, ಸರಸ್ವತಿ, ಲೀಲಾವತಿ ಮತ್ತು ಸುಮಿತ್ರ ಎಂಬ ಮಕ್ಕಳಿದ್ದರು ಎಂದರೆ ಸರಿ. ಆಂಜನಪ್ಪ ಇವರು ಮೃತರಾದ ನಂತರ ಅವರ 2 ನೇ ಹೆಂಡತಿ ಮತ್ತು ಮೊದಲ ಹೆಂಡತಿ ಮಕ್ಕಳಿಗೆ ಆಸ್ತಿ ಹಕ್ಕು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ಸ್ವತ್ತುಗಳು ನಮ್ಮ ಹೆಸರಿನಲ್ಲಿವೆ ಎಂದು ನಮಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಮೊದಲಿನಿಂದಲೂ ನನಗೆ ಗೊತ್ತಿತ್ತು ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಅಣ್ಣ ತಮ್ಮಂದಿರು ಕ್ರಯಕ್ಕೆ ಪಡೆದ ಸ್ವತ್ತನ್ನು ಹಂಚಿಕೊಂಡಿಲ್ಲ. ನಮ್ಮ ತಂದೆ ಎಲ್ಲೆಲ್ಲಿ ಆಸ್ತಿಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಅವರು ಬದುಕಿದ್ದಾಗಲೇ ಗೊತ್ತಿತ್ತು. ಆ ಸ್ವತ್ತಿನ ದಾಖಲೆಗಳು ನಮ್ಮ ತಂದೆಯ ಬಳಿಯಲ್ಲಿದ್ದವು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ಅವರ ಮರಣ ಪ್ರಮಾಣಪತ್ರ ಪಡೆದು ದಾಖಲೆಗಳನ್ನು ನೋಡಿ ಅವುಗಳನ್ನು ನಮ್ಮ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ಇನ್ನೂ ಕೆಲವು ಖಾತೆಯಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆ ಬದುಕಿದ್ದಾಗಲೇ ಆಸ್ತಿ ಕ್ರಯಪತ್ರಗಳನ್ನು ತೋರಿಸಿದ್ದಾರೆ ಹಾಗೂ ಆಸ್ತಿ ಎಲ್ಲಿ ಬರುತ್ತದೆ ಎಂದು ಸಹ ತೋರಿಸಿದ್ದಾರೆ. ಅದೇ ರೀತಿ ಸ್ವತ್ತುಗಳಿಗೆ ಪೆನ್ಸಿಂಗ್ ಮಾಡಿಸಿದ್ದಾರೆ.

ನಮ್ಮ ತಂದೆ 2001-02 ರ ಸಾಲಿನಲ್ಲಿ ಆಸ್ತಿಗಳ ದಾಖಲೆಗಳನ್ನು ತೋರಿಸಿದ್ದಾರೆ. ನಮ್ಮ ತಂದೆ ಆಂಜನಪ್ಪ ಇವರ ಎಲ್ಲ ವಾರಸುದಾರರಿಂದ ಕ್ರಯಪತ್ರ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಕೇವಲ ಪಿ ಎ ಜಯರಾಮ್ ಎಂಬುವವರಿಂದ ಮಾತ್ರ ಕ್ರಯಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿ ಡಿ 1 ನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿ ಡಿ 2 ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಇರುತ್ತದೆ.



ಅದನ್ನು ರೈಫರೆನ್ಸ ಗಾಗಿ ಕೊಟ್ಟಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಯಾವ ನಿರ್ಧಿಷ್ಟ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ ಎಂದು ನನಗೆ ಖಚಿತವಾಗಿ ಹೇಳಲಾಗುವುದಿಲ್ಲ. ನಿ ಡಿ 3 ರ ಬಗ್ಗೆ ನನಗೆ ಗೊತ್ತಿಲ್ಲ.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.